# ಸಾಮಾಜಿಕ ಹರಿಕಾರ ಬಸವಣ್ಣ

**ತ್ರಿವೇಣಿ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಿ. ದೇವರಾಜ ಅರಸು ಸರ್ಕಾರಿ ಪ್ರಥಮದರ್ಜೆ ಕಾಲೇಜು, ಹುಣಸೂರು.

**Received: 19-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284139**

**ABSTRACT:**

ಪ್ರಭುತ್ವದ ಮೇಲಾಟಕ್ಕೆ ಪರ್ಯಾಯವಾಗಿ ಜನಶಕ್ತಿ ರೂಪುಗೊಳ್ಳಬೇಕೆಂದು ಬಯಸುತ್ತಿದ್ದ ಬಸವಣ್ಣನವರು ಕಾಯಕ-ದಾಸೋಹಗಳ ಮುಖೇನ ಅದನ್ನು ಸಾಧಿಸುವ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಕಾಳಜಿಯುಳ್ಳ ಸಮಾನ ಮನಸ್ಕರ ಸಂಘಟನೆಯಿಂದ ಮಾತ್ರ ಇಂಥದ್ದನ್ನು ಸಾಧಿಸಲು ಸಾಧ್ಯವೆಂಬ ನಿಲುವಿನಲ್ಲಿ, ಜಾತಿ, ವರ್ಣ, ವರ್ಗಗಳೇ ಮೊದಲಾದ ಎಲ್ಲ ಬಂಧನಗಳನ್ನು ಮೀರಿದ 'ಅನುಭವ ಮಂಟಪ' ಎಂಬ ಒಂದು ಅದ್ಭುತ ವೇದಿಕೆಯನ್ನು ರೂಪಿಸಿದರು. ಅನುಭವಮಂಟಪದಲ್ಲಿ ಎಲ್ಲರೂ ಸಮಾನಭಾವದಲ್ಲಿ ಸಾಮಾಜಿಕ ಒಳಿತಿನ ಉದ್ದೇಶದಿಂದ ಸೇರಿ ಪರಸ್ಪರ ಚರ್ಚೆ ಮಾಡಿದರು. ಆ ಮೂಲಕ ಅಂದೇ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲನ್ನು ಹಾಕಿದರು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇನ್ನಿಲ್ಲದ ಮಹತ್ವ ನೀಡಿದ ಅನುಭವ ಮಂಟಪವು ಶರಣ ಶರಣೆಯರೆಲ್ಲ ಲಿಂಗ-ಜಾತಿಬೇಧಗಳಿಲ್ಲದಂತೆ ಒಗ್ಗೂಡಲು ಇಂಬು ನೀಡಿತು. ಇಂಥ ಹತ್ತು ಹಲವು ವಿಭಿನ್ನ ಪ್ರಯೋಗಗಳ ಅಸ್ಪೃಶ್ಯತೆಯ ಕೊಳಕಿನಿಂದ ಸಮಾಜವನ್ನು ಮುಕ್ತಗೊಳಿಸಿ, 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' ಎಂಬ ಅರಿವನ್ನು ಮೂಡಿಸಿದರು. ಮರ್ತ್ಯದೊಳಗೆ ಬದುಕಬೇಕಾದರೆ ಆ ಹೊತ್ತಿನಲ್ಲಿ ಬಾಳ್ವಿಕೆ ಶುದ್ಧತೆಯೇ ಮುಖ್ಯ ಎಂಬುದನ್ನು ಬಸವಣ್ಣನವರು ಇನ್ನಿಲ್ಲದಷ್ಟು ತೀವ್ರ ನೆಲೆಯಲ್ಲಿ ಪ್ರತಿಪಾದಿಸಿದರು. ಜ್ಞಾನ ಮತ್ತು ಕ್ರಿಯೆಗಳಿಂದ ಕೂಡಿದ ಜೀವಕೇಂದ್ರಿತ ಪ್ರಜ್ಞೆ ಎಲ್ಲರಲ್ಲಿ ರೂಪುಗೊಳ್ಳಬೇಕೆಂದು ಬಸವಣ್ಣನವರು ಸದಾ ಹಂಬಲಿಸಿದರು.

**KEYWORDS:**

ಪ್ರಭುತ್ವ , ರಾಜಶಾಹಿ, ಅಂತಃಸಾಕ್ಷಿ, ದಾಸೋಹ, ಕಮ್ಮಟ.

ಅನನ್ಯ ಜೀವನಪ್ರೀತಿ, ಎಣೆಯಿಲ್ಲದ ಸಾಮಾಜಿಕ ಬದ್ಧತೆ, ಸೋಗಲಾಡಿತನವಿಲ್ಲದ ಮಾತು, ಕಪಟತನಕ್ಕೆ ಎಡೆಯಿಲ್ಲದ ನಡವಳಿಕೆ, ಸ್ಫಟಿಕಶುದ್ಧ ಮನಸ್ಸು, ಅಂತರಂಗ ಬಹಿರಂಗದ ಪಾರದರ್ಶಕತೆಯೊಂದಿಗೆ ಸದಾ ಜನರ ನೋವಿಗೆ ಮಿಡಿದ ಮತ್ತು ಸತ್ಪಾತ್ರಕ್ಕೆ ಹಂಬಲಿಸಿದ ಬಹು ದೊಡ್ಡ ಚೇತನ ಬಸವಣ್ಣನವರು. 'ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ, ಶಿವಭಕ್ತರಾದವರೆಲ್ಲರೂ ಒಂದೇ' ಎಂಬ ಸರ್ವಸಮಾನತೆಯ ಆಶಯವು ಬಸವಣ್ಣನವರ ಪ್ರಧಾನ ನಿಲುವಾಗಿದೆ. ಈ ನಿಲುವಿನೊಂದಿಗೆ ಅವರು ವರ್ಣವ್ಯವಸ್ಥೆಯು ಶತಮಾನಗಳಿಂದ ಸೃಷ್ಟಿಸಿದ್ದ ಶ್ರೇಷ್ಠ-ಕನಿಷ್ಠವೆಂಬ ಜಾತಿ ತರತಮವನ್ನು ಸ್ಪಷ್ಟವಾಗಿ

ನಿರಾಕರಿಸಿದರು. ಜೊತೆಗೆ ಮನುಷ್ಯನ ಯೋಗ್ಯತೆಯನ್ನು ಅಳೆಯುವ ಆತ್ಯಂತಿಕ ಮಾನದಂಡವಾಗಿದ್ದ ಜಾತಿಯ ಬೇರುಗಳನ್ನೇ ಅಲುಗಾಡಿಸಿ ಸಡಿಲಗೊಳಿಸಿದರು. ಆ ಮೂಲಕ ಹುಟ್ಟಿನಾಧಾರಿತ ಜಾತಿ ಕುಲಗಳ ಕಾರಣಕ್ಕೆ ನೊಂದಿದ್ದ ಮಾನವ ಸಂಕುಲವನ್ನು ತನ್ನ ಪ್ರೀತಿಯ ತೆಕ್ಕೆಗೆ ಸೆಳೆದುಕೊಂಡರು. 'ದಯವಿಲ್ಲದ ಧರ್ಮ ಅದಾವುದಯ್ಯಾ, ದಯವೇ ಬೇಕು ಸಕಲ ಪ್ರಾಣಿಗಳೆಲ್ಲದರಲ್ಲಿ, ದಯವೇ ಧರ್ಮದ ಮೂಲವಯ್ಯಾ' ಎಂದು ಹೇಳಿ ಕರುಣೆ ಮತ್ತು ದಯೆಗಳೆ ಧರ್ಮದ ಜೀವಾಳ, ಪ್ರೀತಿಯಿಂದ ಮಾತ್ರ ಸಕಲ ಜೀವಜಾತಿಗೆ ಉಳಿಗಾಲವಿದೆ ಎಂದು ಸಾರಿದರು.

'ಎನಗಿಂತ ಕಿರಿಯರಿಲ್ಲ' ಎಂದು ಹೇಳಿದ ಬಸವಣ್ಣ ಸಮಾಜದ ಎಲ್ಲಾ ಹಿನ್ನೆಲೆಯ ಜೀವಪರರಿಗೆ ಪ್ರೀತಿಯ ಅಣ್ಣನಾದರು. ನಡೆ-ನುಡಿಗಳಲ್ಲಿ ಏಕತೆಯನ್ನು ಪ್ರತಿಪಾದಿಸುತ್ತಾ ಜನಸಮುದಾಯದ ನಡುವೆ ನಿಂತು ಕಾಯಕ ಪ್ರಜ್ಞೆಯನ್ನು ಬಿತ್ತಿದ ಅವರು, ಲೋಕವಿಕಾರಗಳನ್ನು ನೇರವೂ ಸರಳವೂ ಆದ ಜನಬಳಕೆಯ ಭಾಷೆಯಲ್ಲೇ ಖಂಡಿಸಿದರು. ಇಂದಿಗೆ ಸರಿಸುಮಾರು 900 ವರ್ಷಗಳ ಹಿಂದೆಯೇ ಹಲವು ನೆಲೆಯಲ್ಲಿ ಚಲನಶೀಲತೆಯನ್ನು ಕಳೆದುಕೊಂಡು ಸ್ಥಗಿತ ಸ್ವರೂಪದಲ್ಲಿದ್ದ ಮನುಷ್ಯ ಸಮಾಜದ ನಡುವೆ ಚಿಕಿತ್ಸಕನಂತೆ ನಿಂತು ಎಲ್ಲ ಬಗೆಯ ಜೀವವಿರೋಧಿ ನಿಲುವುಗಳನ್ನು ಮೆಟ್ಟಿ, ಹಸನಾದ ಬದುಕಿಗಾಗಿ ತೀವ್ರವಾಗಿ ಹಂಬಲಿಸಿದರು. ಆ ಮೂಲಕ ಮನುಷ್ಯನ ಎಲ್ಲಾ ಸಂಕಟ ತಲ್ಲಣಗಳ ಕಡೆಗೆ ಸಮಾಜವು ಕಣ್ಣು, ಕಿವಿಗಳನ್ನು ತೆರೆಯುವ ನಿಟ್ಟಿನಲ್ಲಿ ಪ್ರೇರೇಪಿಸಿದರು.

ಪ್ರಭುತ್ವದ ದರ್ಪವನ್ನು ಮೆಲುದನಿಯಲ್ಲಿ ವಿರೋಧಿಸುತ್ತಲೇ, ದುಡಿಯುವ ವರ್ಗಕ್ಕೆ ದಕ್ಕಬೇಕಾದ ನ್ಯಾಯವನ್ನು ಪ್ರಬಲವಾಗಿ ಪ್ರತಿಪಾದಿಸಿ, ಅಹಿಂಸಾತ್ಮಕ ಮಾರ್ಗದ ಮೂಲಕ ಸಾಧಿಸಲು ಪ್ರಯತ್ನಿಸಿದರು. ಕಾಯಕ ತತ್ವವನ್ನು ಬದುಕಿನ ಮೂಲದ್ರವ್ಯವಾಗಿ ಪ್ರತಿಪಾದಿಸಿ, ಆ ಕಾಯಕದಿಂದ ಸರ್ವಸಿದ್ಧಿಯನ್ನು ಕಾಣುವ ಭಾವವನ್ನು ಜನಸಾಮಾನ್ಯರಲ್ಲಿ ಬಿತ್ತಿದರು. ಶ್ರಮದಿಂದ ಆರ್ಥಿಕ ಅಭಿವೃದ್ಧಿಯೆಂಬ ಬಸವಣ್ಣನವರ ಪ್ರಜಾತಾಂತ್ರಿಕ ಆಲೋಚನೆಗಳು ಅಂದಿನ ಸಮಾಜದಲ್ಲಿ ಹೊಸ ಬಗೆಯ ಸಂಚಲನವನ್ನು ಉಂಟುಮಾಡಿದವು. "ಬಸವಣ್ಣನವರನ್ನು ಯುಗದ ಉತ್ಸಾಹಕ್ಕೆ ಕಾರಣ ಪುರುಷನೆಂದು ಅಲ್ಲಮಪ್ರಭುಗಳ ಮೂಲಕ ಶೂನ್ಯ ಸಂಪಾದನೆ ಕೊಂಡಾಡಿಸಿದೆ. ಬಸವಣ್ಣನವರು ತಾವಿದ್ದ ಯುಗದ ಉತ್ಸಾಹ ಮಾತ್ರವಲ್ಲ ಅನಂತರದ ಹಲವು ಯುಗಗಳ ಉತ್ಸಾಹಕ್ಕೂ ಕಾರಣರಾಗಿದ್ದಾರೆ. ಬಸವಣ್ಣನವರು ಮತ್ತು ವಚನಕಾರರು ಬಲುಮಟ್ಟಿಗೆ ಜಡಗೊಂಡಿದ್ದ ಸಾಂಪ್ರದಾಯಿಕ ಧರ್ಮಧಾರಿತ ಸಮಾಜದಲ್ಲಿ ಚಲನೆಯನ್ನು ತಂದವರು. ಅಂತರಂಗದ ಕ್ರಾಂತಿಗೆ ಪ್ರಾಮುಖ್ಯ ನೀಡಿದಷ್ಟೇ ಸಾಮಾಜಿಕ ಬದಲಾವಣೆಯು ಅಗತ್ಯವೆಂದು ಪ್ರತಿಪಾದಿಸಿದವರು."[1] ಕಾಯಕದೊಳಗೇ ಅಧ್ಯಾತ್ಮವನ್ನು ಮಿಳಿತಗೊಳಿಸಿ, ಕಾಯಕನಿಷ್ಠೆಯಲ್ಲಿ ಇಹಪರ ಸುಖವಡಗಿದೆ ಎಂದ ಬಸವಣ್ಣ ಜಾತಿಜಾತಿಗಳ ಮೇಲಾಟದಲ್ಲಿ ವಿಕ್ಷಿಪ್ತಗೊಂಡಿದ್ದ ಸಮಾಜಕ್ಕೆ ಕಾಯಕ ತತ್ವವನ್ನು ಮಹತ್ವದ ಮದ್ದಾಗಿ ಬಳಸಿದರು. ಅಲ್ಲದೆ ಈ ಕಾಯಕ ತತ್ವವನ್ನೇ ಶರಣರಲ್ಲಿ ಏಕತೆಯನ್ನು ಮೂಡಿಸಲು ಮೂಲಮಂತ್ರವಾಗಿ ಬಳಸಿದರು.

ಶ್ರಮವಿಭಜನೆಯ ತತ್ವದ ಹಿನ್ನೆಲೆಯಲ್ಲಿ ರೂಪಿತವಾದ ವರ್ಗದ ವಿಂಗಡಣೆಯು ಕ್ರಮೇಣ ಜಾತಿಯ ವಿಕಾರ ಸ್ವರೂಪ ತಾಳಿ ಶೋಷಣೆಯ ಬಹುದೊಡ್ಡ ಅಸ್ತ್ರವಾದುದನ್ನು ಬಸವಣ್ಣ ವಿರೋಧಿಸಿದರು. ವೃತ್ತಿಯು ಜಾತಿಯಾದ ವಿಕೃತ ಬದಲಾವಣೆಗೆ ಕಾಯಕ ತತ್ವದಲ್ಲಿ ಪರಿಹಾರವನ್ನು ಕಂಡುಕೊಂಡರು. ಆ ಮೂಲಕ ಶತಮಾನಗಳಿಂದ ಬೇರೂರಿದ್ದ ಜಾತಿಯ ಮೂಲಕ್ಕೆ ಕೊಡಲಿ ಪೆಟ್ಟುಹಾಕಿ ಮಾನವಪ್ರೇಮ ಬಿತ್ತಿದರು. ದೇವರೆಂದರೆ ನಮ್ಮ ಅಂತಃಸಾಕ್ಷಿ, ದೇವರು ದೇಹದಲ್ಲೇ ಅಡಗಿರುವವನು, ಕಾಯಕವೇ ನಾವು ಅವನಿಗೆ ಅರ್ಪಿಸುವ ಪೂಜೆ ಎಂಬುದು ಬಸವಣ್ಣನವರ ಅಚಲ ನಿಲುವು. ಈ ನಿಲುವಿನ ಮೂಲಕವೇ ಎಲ್ಲಾ ಲೋಕವಿಕಾರಗಳನ್ನು ಸ್ಪಷ್ಟವಾಗಿ ಖಂಡಿಸುತ್ತಾ, ಮಾನವ ಸಾಮರ್ಥ್ಯದ ಸಮರ್ಥ ಸದ್ಬಳಕೆಯನ್ನು ಕಾಯಕ ತತ್ವದ ಮೂಲಕ ಬಸವಣ್ಣನವರು ಪ್ರತಿಪಾದಿಸಿದರು. ಹಾಗೆಯೇ ಆರೋಗ್ಯಪೂರ್ಣ ಸಮಾಜಕ್ಕೆ ದೈಹಿಕ ಶ್ರಮವೇ ಮದ್ದು ಎಂದು ಹೇಳಿ, ಜೀವಪರವಾದ ನಿಲುವುಗಳೆಲ್ಲ ಜಂಗಮಸ್ವರೂಪಿ ಎಂದು ಭಾವಿಸಿದರು.

ಬದುಕಿನ ಸಿದ್ಧಿ ಇರುವುದು ದೇಹ ಮತ್ತು ಮನಸ್ಸುಗಳ ಶುದ್ಧಿಯಲ್ಲಿ. ಇದೇ ಬದುಕಿನ ಯಶಸ್ಸಿನ ಸೂತ್ರ ಎನ್ನುತ್ತಲೇ, 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಅನ್ಯರಿಗೆ ಅಸಹ್ಯಪಡಬೇಡ' ಮುಂತಾಗಿ ಹೇಳಿ ಬದುಕನ್ನು ಹಸನುಗೊಳಿಸಿಕೊಳ್ಳಬೇಕಾದ ಹಾದಿಯನ್ನು ಬಸವಣ್ಣನವರು ತೋರುತ್ತಾರೆ.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.**
**ಇದೇ ಅಂತರಂಗ ಶುದ್ಧಿ , ಇದೇ ಬಹಿರಂಗ ಶುದ್ಧಿ ,**
**ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ.**

ಆ ನಿಟ್ಟಿನಲ್ಲಿ 'ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ, ಎನ್ನೊಳಗೇನೂ ಶುದ್ಧವಿಲ್ಲ, ನೋಡಯ್ಯಾ!' ಎನ್ನುತ್ತಾ ತಮ್ಮನ್ನು ತಾವೇ ನಿಕಷಕ್ಕೆ ಒಡ್ಡಿಕೊಂಡು ಮಾದರಿಯಾಗಿ ನಿಲ್ಲುತ್ತಾರೆ. ನಡೆ ನುಡಿ ಶುದ್ಧಿಯಲ್ಲೇ ಭಗವಂತನ ಸಾಕ್ಷಾತ್ಕಾರ ಅಡಗಿದೆ, 'ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ', ನುಡಿಯೊಳಗೇ ಕೈಲಾಸ ಎನ್ನುವ ತಮ್ಮ ಪ್ರಖರ ವೈಚಾರಿಕ ಆಲೋಚನೆಗಳಿಂದ, ಪಟ್ಟಭದ್ರರು ಸೃಷ್ಟಿಸಿದ್ದ ಅಧ್ಯಾತ್ಮವೆಂಬ ಭ್ರಮೆಯಲ್ಲಿ ಜೋತು ಬಿದ್ದಿದ್ದವರನ್ನು ಬಸವಣ್ಣನವರು ಜಾಗೃತಗೊಳಿಸಿದರು.

ಮನುಷ್ಯ ಸಂಬಂಧಗಳು ತನ್ನೆಲ್ಲಾ ಕೃತಕ ವರ್ತುಲಗಳಿಂದ ಹೊರಬಂದು ಸಹಜ ಸ್ವರೂಪದಲ್ಲಿ ನೆಲೆಗೊಳ್ಳಬೇಕು. ಆಗ ಮಾತ್ರ ಸಾಮಾಜಿಕ ಸಮಾನತೆ, ಲಿಂಗಸಾಮರಸ್ಯ, ಸೋದರ ಮನೋಭಾವ, ವ್ಯಕ್ತಿ-ವೃತ್ತಿಗೌರವ ಮೊದಲಾದವುಗಳು ನಮ್ಮ ನಡುವೆ ಸ್ಥಾಪಿತಗೊಳ್ಳಲು ಸಾಧ್ಯ ಎಂಬುದು ಬಸವಣ್ಣನವರ ಸ್ಪಷ್ಟ ನಿಲುವು. ಈ ನಿಟ್ಟಿನಲ್ಲಿ ಮನುಷ್ಯ ಡಾಂಭಿಕತೆ, ಸಣ್ಣತನ, ಅಸಂಗತತೆ ಮತ್ತು ಕೀಳರಿಮೆಗಳನ್ನು ಮೀರಿದ ಪರಿಶುದ್ಧ ಹಾದಿಯನ್ನು ಆಯ್ದುಕೊಳ್ಳಬೇಕು ಎನ್ನುತ್ತಾರೆ. 'ಗುಣವಿಲ್ಲದಿದ್ದಡೆ ಕೆಡವಿ ಮೂಗ ಕೊಯ್ವುದ ಮಾಂಬನೆ ಕೂಡಲಸಂಗಮದೇವಯ್ಯ' ಎಂದು ಬದುಕಿನ ಸಾರ್ಥಕತೆ ನಡೆನುಡಿಯಲ್ಲಿದೆ

ಎಂಬ ಎಚ್ಚರ ಮೂಡಿಸುತ್ತಾರೆ. ಹಾಗಾಗಿ ನಮ್ಮ ಮಾತು ಮತ್ತು ನಡವಳಿಕೆಗಳು ನಯವಿನಯದಿಂದ ಕೂಡಿರಬೇಕು, ಪ್ರೀತಿಪೂರ್ವಕವಾಗಿ, ಸ್ಫುಟವಾಗಿರುವುದರ ಜೊತೆಗೆ ಪಾರದರ್ಶಕವಾಗಿರಬೇಕು ಎನ್ನುತ್ತಾರೆ. ವಿನಮ್ರತೆ ಮತ್ತು ಅಸಾಧಾರಣ ಬದ್ಧತೆಯೊಂದಿಗೆ ಜನಸಮುದಾಯದ ನಡುವೆ ನಿಂತು ಮಾತನಾಡುವ ಬಸವಣ್ಣನವರ ನೇರ ನಿಷ್ಠೂರ ಶೈಲಿಯು ಅವರ ತಾತ್ವಿಕ ನಿಲುವನ್ನು ಬಿಂಬಿಸುತ್ತದೆ. "ಬಸವಣ್ಣನ ವಚನಗಳು ಎಂದೆಂದೂ ತಮ್ಮ ಹೊಳಪನ್ನೂ, ಪ್ರಸ್ತುತತೆಯನ್ನೂ ಕಳೆದುಕೊಳ್ಳದ ಮಾಣಿಕ್ಯಗಳು. ಅವುಗಳಲ್ಲಿನ ವಿವೇಕ ಎಲ್ಲಾ ಕಾಲಕ್ಕೂ ಸಲ್ಲುವಂತಹುದು."[2] 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬುದು ಬಸವಣ್ಣನವರ ಸಾಮಾಜಿಕ ಸಮಾನತೆಯ ಆಶಯದ ದೃಢ ಹೆಜ್ಜೆಯಾಗಿದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂಬ ಎಚ್ಚರಿಕೆಯ ಮಾತನಾಡುತ್ತಾ, ಸಮಾಜದಲ್ಲಿದ್ದ ತಮಂಧಕ್ಕೆ ಜ್ಞಾನದ ಜ್ಯೋತಿಯನ್ನು ಪರ್ಯಾಯವಾಗಿ ಬಸವಣ್ಣನವರು ನಿರೂಪಿಸುತ್ತಾರೆ.

ಸಕಲ ಜೀವಾತ್ಮರಿಗೂ ಲೇಸು ಬಯಸುವುದೇ ಧರ್ಮ. ಎಂತಲೇ ಪ್ರತಿಯೊಬ್ಬರೂ ತಮ್ಮ ಅಂತರಂಗದಲ್ಲಿರುವ ಚೈತನ್ಯವನ್ನು ಜಾಗೃತಿಗೊಳಿಸಿಕೊಳ್ಳುವ ಮೂಲಕ ಪುರೋಹಿತಶಾಹಿಯು ಬಿತ್ತಿರುವ ಅಮಾನವೀಯ ಕಟ್ಟುಪಾಡುಗಳನ್ನು ಹೊಡೆದು ಹಾಕಬೇಕೆಂದು ಬಸವಣ್ಣನವರು ಕರೆ ನೀಡುತ್ತಾರೆ. ಜೊತೆಗೆ ಜಾತಿ, ವರ್ಗ, ಲಿಂಗ ತರತಮಗಳಿಂದ ಹೊರಬಂದು ಸರ್ವಸಮತೆಯ ಅಡಿಯಲ್ಲಿ ಬದುಕು ರೂಪಿತವಾಗಬೇಕೆನ್ನುತ್ತಾರೆ. ಅದನ್ನು ಆಗುಮಾಡುವ ಸಲುವಾಗಿ ತಮ್ಮನ್ನು ತಾವು ತೆತ್ತುಕೊಳ್ಳುವ ಬಸವಣ್ಣನವರು 'ಆನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯಾ' ಎಂದು ತನ್ನ ಹುಟ್ಟನ್ನು ಕಳಗಿಸಿಕೊಳ್ಳುವ ಮೂಲಕ ಎಲ್ಲರೊಂದಿಗೆ ಬೆರೆಯುವ ಮಾರ್ಗವನ್ನು ಕಂಡುಕೊಳ್ಳುತ್ತಾರೆ. 'ಉತ್ತಮ ಕುಲದಲ್ಲಿ ಹುಟ್ಟಿದವನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ' ಎಂದು ಮಾತನಾಡುತ್ತಾ, ಜನಸಾಮಾನ್ಯರೊಟ್ಟಿಗೆ ನಿಂತು ವಿನೂತನ ಪ್ರಜ್ಞೆಯ ಬೀಜವನ್ನು ಸಮೂಹದಲ್ಲಿ ಬಿತ್ತಿದರು. 'ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ, ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ' ಎಂದು ತನ್ನ ಮೇಲರಿಮೆಯನ್ನು ಸ್ಪಷ್ಟವಾಗಿ ನಿರಾಕರಿಸಿ ಸಾಮಾಜಿಕ ಸಮಾನತೆಗೆ ಪರಿಪೂರ್ಣವಾಗಿ ತೆತ್ತುಕೊಳ್ಳುತ್ತಾರೆ.

'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎನ್ನುವ ಭಾವದ ಮೂಲಕ ಸಂಸಾರ ನೀತಿ ಸಂಹಿತೆಯನ್ನು ಹೊಸ ಬಗೆಯಲ್ಲಿ ರೂಪಿಸಿದ ಬಸವಣ್ಣನವರು, ಅಧ್ಯಾತ್ಮದ ಸಾಧನೆಗೆ ಹೆಣ್ಣು ಮಾರಕವಾಗುತ್ತಾಳೆ ಎನ್ನುವ ನಮ್ಮ ಸಾಂಪ್ರದಾಯಿಕ ಮನಸ್ಥಿತಿಯನ್ನು ತೊಡೆದು ಹಾಕಿದರು. ಲಿಂಗ-ಜಾತಿ ತಾರತಮ್ಯವನ್ನು ವಿರೋಧಿಸುವ ಕಿಚ್ಚನ್ನು ಹಚ್ಚುತ್ತಲೇ, ಅಂತರ್ಜಾತಿ ವಿವಾಹಕ್ಕೆ ನಾಂದಿ ಹಾಡುವ ಮೂಲಕ ಮನ್ವಂತರವನ್ನೇ ಸೃಷ್ಟಿಸಿದರು. ಹೀಗೆ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ ಬಸವಣ್ಣನವರು ಸರ್ವಸಮತತ್ವವನ್ನು ಸಾಧಿಸಿ ವಿಶ್ವಗುರುವಾಗಿದ್ದಾರೆ. ಇವರ ಸಮಕಾಲೀನರಾದ ಅಕ್ಕಮಹಾದೇವಿ 'ನಿಜದ ನಿರ್ವಲಯ ಬಾಗಿಲ ತೋರಿದಾತ ಬಸವಣ್ಣ' ಎಂದು ಸ್ತುತಿಸಿದರೆ, ಮಹಾಜ್ಞಾನಿ ಅಲ್ಲಮ 'ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುವಾಗಿ ಹುಟ್ಟಿಸಿದೆಯಯ್ಯಾ ಗುಹೇಶ್ವರಾ!' ಎನ್ನುತ್ತಾರೆ. ಈ ಮಾತುಗಳು

ಬಸವಣ್ಣನವರ ಘನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿವೆ. ಸಕಲ ಜೀವಾತ್ಮರಿಗೂ ಲೇಸು ಬಯಸುವುದೇ ಧರ್ಮ. ಎಂತಲೇ ಪ್ರತಿಯೊಬ್ಬರೂ ತಮ್ಮ ಅಂತರಂಗದಲ್ಲಿರುವ ಚೈತನ್ಯವನ್ನು ಜಾಗೃತಿಗೊಳಿಸಿಕೊಳ್ಳುವ ಮೂಲಕ ಪುರೋಹಿತಶಾಹಿಯು ಬಿತ್ತಿರುವ ಅಮಾನವೀಯ ಕಟ್ಟುಪಾಡುಗಳನ್ನು ಹೊಡೆದುಹಾಕಬೇಕೆಂದು ಬಸವಣ್ಣನವರು ಕರೆ ನೀಡುತ್ತಾರೆ. ಅದನ್ನು ಆಗುಮಾಡುವ ಸಲುವಾಗಿ ತಮ್ಮನ್ನು ತಾವು ತೆತ್ತುಕೊಳ್ಳುವ ಬಸವಣ್ಣನವರು 'ಆನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯಾ' ಎಂದು ತನ್ನ ಹುಟ್ಟನ್ನು ಕೆಳಗಿಸಿಕೊಳ್ಳುವ ಮೂಲಕ ಎಲ್ಲರೊಂದಿಗೆ ಬೆರೆಯುವ ಮಾರ್ಗವನ್ನು ಕಂಡುಕೊಳ್ಳುತ್ತಾರೆ.

### ಅಡಿ ಟಿಪ್ಪಣಿಗಳು:

1. ನಾಗಭೂಷಣ ಸ್ವಾಮಿ ಓ. ಎಲ್. (2023). ಬಸವ ವಚನವಾಚಿಕೆ. ಅಭಿರುಚಿ ಪ್ರಕಾಶನ. ಮೈಸೂರು. ಪು. ಸಂ. XII
2. ನಾರಾಯಣ ಪಿ.ವಿ. (2018). ಬಸವಣ್ಣನವರ ವಚನಗಳು. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. IV

### ಪರಾಮರ್ಶನ ಗ್ರಂಥಗಳು:

1. ಪೋತೆ ಎಚ್. ಟಿ. (2011). ಜಾಗತಿಕ ಚಿಂತಕರು ಮತ್ತು ಬಸವಣ್ಣ. ಕನ್ನಡ ಅಧ್ಯಯನ ಸಂಸ್ಥೆ. ಗುಲಬರ್ಗಾ.
2. ರಂಜಾನ್ ದರ್ಗಾ. (2017). ಬಸವಣ್ಣ: ಏಕೆ ಬೇಕು. ಲಡಾಯಿ ಪ್ರಕಾಶನ. ಗದಗ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.